ತಿಳಿದುಕೊಂಡಿದ್ದಾರೆ ಎನಿಸುತ್ತದೆ. ಆದರೆ ಕಳೆದ ಸಾರಿ ಇದ್ದಂಥ ಮಾನ್ಯ ಮುಖ್ಯಮಂತ್ರಿಗಳು ಮತ್ತು ಈಗಿನ ಆರೋಗ್ಯ ಮಮಂತ್ರಿಗಳು ಒಂದು ಆದೇಶವನ್ನು ಇವರ ಬಗ್ಗೆ ಹೊರಡಿಸಿದರು. ಅದಷ್ಟು ಜಾಗ್ರತೆ ಒಂದು ಜನರಲ್ ಆಸ್ಪತ್ರೆಯನ್ನು ಮಾಡಿ ಕೊಡಬೇಕು ಎಂದು ಹೇಳಿದ್ದರು.ಇಲ್ಲಿಯವರೆಗೂ ಕೂಡಾ ಅಧಿಕಾರಿಗಳು ಯಾವ ಕ್ರಮವನ್ನು ಇವರ ಬಗ್ಗೆ ತೆಗೆದುಕೊಂಡಿಲ್ಲ. ಕಳೆದ ಸಾರಿ ನಾನು ಇದೇ ಸದನದಲ್ಲಿ ಪ್ರಶ್ನೆ ಕೇಳಿದಾಗ ನಮ್ಮ ನೆಲಮಂಗಲ ವ್ಯಾಪ್ತಿಯಲ್ಲಿ ಬರತಕ್ಕಂಥ ರಸ್ತೆಯಲ್ಲಿ ಸುಮಾರು 400 ಜನ ಸತ್ತಿದ್ದಾರೆ, 900 ಜನರಿಗೆ ಗಾಯಗಳಾಗಿವೆ ಎಂದು ಹೇಳಿದ್ದಾರೆ. ಈಗ ಔಷಧಿ ಬಗ್ಗೆ ಪ್ರಶ್ನೆ ಕೇಳಿದಾಗ ಮಾನ್ಯ ಮಂತ್ರಿಗಳು ಉತ್ತರದಲ್ಲಿ ಹೆಚ್ಚಿನ ಔಷಧಿಯನ್ನು ಒದಗಿಸುವುದಕ್ಕೆ ಸರ್ವಜನಿಕರಿಂದ ಏನೂ ದೂರುಗಳು ಬಂದಿಲ್ಲ ಎಂದು ಹೇಳಿದ್ದಾರೆ. ಕಳೆದ ಸಾರಿ ಸರ್ಕಾರದವರೇ ಎಷ್ಟೊಂದು ಸಾವು ನೋವುಗಳು ಆಗಿವೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಈ ರೀತಿ ಅವರೇ ಉತ್ತರ ಕೊಟ್ಟಿರುವುದರಿಂದ ಸಾರ್ವಜನಿಕರಿಂದ ದೂರಗಳು ಬರಬೇಕಾಗಿಲ್ಲ. ಇಲ್ಲಿ ಏನಾಗುತ್ತದೆ ಎಂದರೆ ಇಲ್ಲಿ ಔಷಧಿಗಳನ್ನು ಸಮನಾಗಿ ಹಂಚುವುದಕ್ಕೆ ಹೋಗುತ್ತಾರೆ. ಆದರೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಹೆಚ್ಚಿನ ಸಾವು ನೋವುಗಳು, ಅಪಘಾತಗಳು ಆಗುವುದರಿಂದ ಅಲ್ಲಿಗೆ ಹೆಚ್ಚಿನ ಔಷಧವನ್ನು ಬಿಡುಗಡೆ ಮಾಡಿಕೊಡಬೇಕೆಂದು ನಾನು ಸನ್ಮಾನ್ಯ ಆರೋಗ್ಯ ಸಚಿವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

(ಉತ್ತರ ಇಲ್ಲ)

ಪರೀಕ್ಷೆ ವೇಳೆಯಲ್ಲಿ ವಿದ್ಯಾರ್ಥಿಗಳ ಪ್ರವಾಸ

6 - ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ) : ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಾಥಮಿಕ ಶಾಲೆ, ಪ್ರೌಢಶಾಲೆ, ಹಾಗೂ ಕಾಲೇಜುಗಳ ವಿದ್ಯಾರ್ಥಿಗಳನ್ನು ಡಿಸೆಂಬರ್ ತಿಂಗಳ ನಂತರ ರಾಜ್ಯದ ಒಳಗೆ ಅಥವಾ ಹೊರಗೆ ಪ್ರವಾಸ ಮಾಡುವುದನ್ನು ತಪ್ಪಿಸುವ ಮಾಡುವುದನ್ನು ತಪ್ಪಿಸುವ ಬಗ್ಗೆ ಸರ್ಕಾರದವರು ಕ್ರಮವನ್ನೇನಾದರೂ ಕೈಗೊಂಡಿರುವರೇ?

ಆ) ಹಾಗಿಲ್ಲದಿದ್ದಲ್ಲಿ ವಿದ್ಯಾರ್ಥಿಗಳ ಅಭ್ಯಾಸದ ಹಾಗೂ ಪರೀಕ್ಷೆಗಳಮೇಲೆ ಆಗುವ ಪರಿಣಮವನ್ನು ತಪ್ಪಿಸಲು ಸರ್ಕಾರದವರು ಕೈಗೊಳ್ಳಲಿರುವ ಕಾರ್ಯಕ್ರಮವೇನು?

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಮಂತ್ರಿಗಳು):

ಅ) ಇಲ್ಲ.

ಆ) ವಿದ್ಯಾರ್ಥಿಗಳ ಅಭ್ಯಾಸ ಮತ್ತು ಪರೀಕ್ಷೆಗಳಮೇಲೆ ಯಾವ ಪರಿಣಾಮವು ಬೀರುವುದಿಲ್ಲವಾದ್ದರಿಂದ ಯಾವ ಕ್ರಮವು ಉದ್ಭವಿಸುವುದಿಲ್ಲ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೇ, ಪ್ರವಾಸದಿಂದ ಮಕ್ಕಳ ವಿದ್ಯಾಭ್ಯಾಸದ ಮೇಲೆ ಆಗುವಂಥ ಪರಿಣಾಮವನ್ನು ಗಮನದಲ್ಲಿಟ್ಟುಕೊಂಡು ವಿಶೇಷವಾಗಿ ನಾನು ಈ ಪ್ರಶ್ನೆಯನ್ನು ಹಾಕಿದ್ದೇನೆ. ಪರೀಕ್ಷೆ ಸಮೀಪ ಬಂದಾಗ ಇವರ ಟೂರ್ ಪ್ರಾರಂಭವಾಗುತ್ತದೆ. ನಮ್ಮ ಊರಿನಲ್ಲಿ ಒಂದು ಪ್ರೈಮರಿ ಸ್ಕೂಲ್ ಟೂರ್ ಮುಗಿದಮೇಲೆ ಇನ್ನೊಂದು ಪ್ರೈಮರಿ ಸ್ಕೂಲ್ ಟೂರ್ ಪ್ರಾರಂಭವಾಗುತ್ತದೆ. ನಂತರ ಹೈಸ್ಕೂಲ್ ಟೂರ್, ಆಮೇಲೆ ಕಾಲೇಜ್ ಟೂರ್. ಈ ರೀತಿಯಲ್ಲಿ ಟೂರ್ ಮಾಡುವುದರಿಂದ ವಿದ್ಯಾರ್ಥಿಗಳ ಅಭ್ಯಾಸದ ಮೇಲೆ ವಿಪರೀತವಾದ ಪರಿಣಾಮವನ್ನು ಉಂಟುಮಾಡುತ್ತಿದೆ. ಕಡೆಯ ಪಕ್ಷ ಜನವರಿ ನಂತರ ಟೂರ್ ಮಾಡಬಾರದು ಎಂಬ ಬ್ಯಾನ್ ಹಾಕದೇಹೋದರೆ, ವಿದ್ಯಾರ್ಥಿಗಳು ಟೂರ್ ಮುಗಿಸಿಕೊಂಡು ಬಂದು ಪರೀಕ್ಷೆಗಳನ್ನು ಮುಂದೂಡಬೇಕೆಂದು ಝಂಡಾಹಿಡಿದು ನಿಲ್ಲುವ

ಪರಿಸ್ಥಿತಿ ಉದ್ಭವವಾಗುತ್ತದೆ. ಈ ಪರಿಸ್ಥಿತಿ ಉದ್ಭವವಾಗಬಾರದು-ಎಂಬ ಉದ್ದೇಶದಿಂದ ನಾನು ಈ ಪ್ರಶ್ನೆಯನ್ನು ಹಾಕಿದ್ದೇನೆ. ದಯವಿಟ್ಟು ಇದನ್ನು ಏನಾದರೂ ಮಾಡಿ ಕಡ್ಡಾಯಗೊಳಿಸಬೇಕು. ಇದರ ಜೊತೆಯಲ್ಲಿ ಪರೀಕ್ಷೆ ಸಮೀಪ ಬಂದಾಗ ಈ ಗ್ಯಾದರಿಂಗ್, ಸಮ್ಮೇಳನ ಇವುಗಳಿಗೆ ಕಡಿವಾಣ ಹಾಕಬೇಕಾಗಿದೆ. ಇಲ್ಲದಿದ್ದರೆ ಮಕ್ಕಳು ವಿದ್ಯಾಭ್ಯಾಸ ಮಾಡುವುದನ್ನು ಬಿಟ್ಟು ಗ್ಯಾದರಿಂಗ್, ಡ್ರಾಯಿಂಗ್ ಪ್ರದರ್ಶನ, ನಾಟಕದ ರಿಹರ್ಸಲ್ ಇವುಗಳಲ್ಲಿ ತಮ್ಮ ಕಾಲವನ್ನು ವ್ಯಯ ಮಾಡಬೇಕಾಗುತ್ತದೆ. ಇದರಿಂದಾಗಿ ಹಳ್ಳಿಗಾಡು ಪ್ರದೇಶದ ವಿದ್ಯಾರ್ಥಿಗಳಮೇಲೆ ವಿಪರೀತ ಪರಿಣಾಮವಾಗುತ್ತಿದೆ. ಮಕ್ಕಳ ಆರ್ಥಿಕ ಮಟ್ಟ ಕೂಡ ಹದಗೆಡುತ್ತದೆ. ಈ ದೃಷ್ಟಿಯಿಂದ ಮಾನ್ಯ ಮಂತ್ರಿಗಳು ಇದರ ಬಗ್ಗೆ ಯೋಗ್ಯವಾದ ನಿರ್ಣಯವನ್ನು ತೆಗೆದುಕೊಳ್ಳಬೇಕೆಂದು ಈ ಸದನದ ಮೂಲಕ ಅವರಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ: ಮಾನ್ಯ ಅಧ್ಯಕ್ಷರೆ, ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗೆ ಪ್ರವಾಸ ಕಾರ್ಯಕ್ರಮ ಕೂಡ ಪಠ್ಯೇತರ ಚಟುವಟಿಕೆಗಳಲ್ಲಿ ಒಂದು ಅಂಗವಾಗಿದೆ. ಸನ್ಮಾನ್ಯ ಶಾಸಕರು, ಪರೀಕ್ಷೆಯ ಸಮಯದಲ್ಲಿ ನಾಟಕ ರಿಹರ್ಸಲ್ ಮಾಡುವುದು, ಪ್ರದರ್ಶನ ಮಾಡುವುದು ಅಥವಾ ಪ್ರವಾಸ ಮಾಡುವುದರಿಂದ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗುತ್ತದೆ ಎಂದು ತಮ್ಮ ಆತಂಕವನ್ನು ವ್ಯಕ್ತಪಡಿಸಿದ್ದಾರೆ. ಅದನ್ನು ನಾನೂ ಒಪ್ಪುತ್ತೇನೆ. ತಾಂತ್ರಿಕ ಶಿಕ್ಷಣ ಕಾಲೇಜುಗಳು ಅಥವಾ ಸಂಸ್ಥೆಗಳನ್ನು ಬಿಟ್ಟರೆ ಉಳಿದ ಶಾಲಾಕಾಲೇಜುಗಳಲ್ಲಿ ಡಿಸೆಂಬರ್ ನಂತರ ಜನವರಿಯೊಳಗೆ ಪ್ರವಾಸ ಕಾರ್ಯಕ್ರಮಗಳನ್ನು ಸಾಧಾರಣವಾಗಿ ಮುಗಿಸುತ್ತಾರೆ. ತಾಂತ್ರಿಕ ಶಿಕ್ಷಣದ ವಿದ್ಯಾರ್ಥಿಗಳಿಗೆ ಪ್ರವಾಸವು ಕೂಡ ಪಾಠದ ಒಂದು ಅಂಗವಾಗಿರುತ್ತದೆ. ಸಾಧಾರಣವಾಗಿ ಅವರು ಡಿಸೆಂಬರ್ ತಿಂಗಳ ಒಳಗಡೆಯೇ ಅವರ ಪ್ರವಾಸ ಕಾರ್ಯಕ್ರಮಗಳನ್ನು ಮುಗಿಸುತ್ತಾರೆ. ಆದರೂ ಕೂಡ ತಾವು ಹೇಳಿದ ಪ್ರಕಾರ ತೊಂದರೆ ಬರುವುದರಿಂದ ತಾಂತ್ರಿಕ ಶಿಕ್ಷಣ ಇಲಾಖೆಯಿಂದ ಹಾಗೂ ಉಳಿದ ಶಿಕ್ಷಣ ಇಲಾಖೆಗಳಿಂದ ಕಳುಹಿಸಿ ಯಾವ ರೀತಿ ಪ್ರವಾಸ ಕಾರ್ಯಕ್ರಮವನ್ನು ಪಠ್ಯಕ್ರಮಕ್ಕೆ ಹಾಗೂ ಪರೀಕ್ಷೆಗೆ ತೊಂದರೆಯಾಗದ ರೀತಿಯಲ್ಲಿ ಕೈಗೊಳ್ಳಬೇಕೆಂದು ತಿಳಿಸುತ್ತೇನೆ.

ಕೋಲಾರ ಜಿಲ್ಲೆಯಲ್ಲಿ ವಿದ್ಯಾರ್ಥಿ-ಶಿಕ್ಷಕರ ಅನುಪಾತ

281 - ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲೆಯಲ್ಲಿರುವ ಪ್ರಾಥಮಿಕ ಶಾಲೆಗಳ ಸಂಖ್ಯೆ (ಶಾಖಾ ಕಾಲೇಜುಗಳೂ ಸೇರಿ) ಪ್ರೌಢ ಶಾಲೆಗಳು, ಕಿರಿಯ ಕಾಲೇಜು ಮತ್ತು ಕಾಲೇಜುಗಳ ಸಂಖ್ಯೆ ಎಷ್ಟು? ಈ ಶಾಲೆಗಳಲ್ಲಿ ಶಿಕ್ಷಕರ ಮತ್ತು ಮಕ್ಕಳ ಅನುಪಾತ ಎಷ್ಟು?

ಆ) ಈ ಇರುವ ಶಿಕ್ಷಕರ ಸಂಖ್ಯೆಯು ಮಕ್ಕಳ ಮತ್ತು ಶಿಕ್ಷಕರ ಅನುಪಾತಕ್ಕೆ ಸರಿದೂಗುವುದೇ?

ಇ) ಹಾಗಿಲ್ಲದಿದ್ದಲ್ಲಿ ಖಾಲಿ ಇರುವ ಪ್ರತಿಯೊಂದು ವರ್ಗದ ಹುದ್ದೆ ಸಂಖ್ಯೆ ಮತ್ತು ಯಾವ ದಿನಾಂಕ ಎಲ್ಲಾ ಹುದ್ದೆಗಳನ್ನು ತುಂಬಲಾಗುವುದು.

ಶ್ರೀ ವೀರಪ್ಪ ಮೊಯಿಲಿ (ಶಿಕ್ಷಣ ಮಂತ್ರಿಗಳು):

ಅ) ಪ್ರಾಥಮಿಕ ಶಾಲೆಗಳು - 2981

ಪ್ರೌಢ ಶಾಲೆಗಳು - 85

ಪದವಿಪೂರ್ವ ಕಾಲೇಜು - 24

ಕಾಲೇಜುಗಳು - 13